ಮಧ್ಯಂತರ ಅರ್ಜಿಯ ಮೇಲಿನ ಆದೇಶದ ಮೇರೆಗೆ ಸಾಕ್ಷಿಯನ್ನು ಕರೆಸಿ ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ಶ್ರೀ ಎಸ್.ಎನ್.ಜಿ ವಕೀಲರಿಂದಃ

ದಿನಾಂಕ 16.07.1942 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ-73 ಎಂದು, ಅಸಲು ದಾವೆ ಸಂಖ್ಯೆ 27/1985 ರಲ್ಲಿ ಸಿದ್ದಲಿಂಗಯ್ಯನವರ ಸಾಕ್ಷಿ ಹೇಳಿಕೆಯ ದೃಢೀಕೃತ ನಕಲನ್ನು ನಿಪಿ-74 ಎಂದು, ಅಸಲು ದಾವೆ ಸಂಖ್ಯೆ 27/1985 ರಲ್ಲಿ ರಾಮಕೃಷ್ಣಯ್ಯನವರ ಸಾಕ್ಷಿ ಹೇಳಿಕೆಯ ದೃಢೀಕೃತ ನಕಲನ್ನು ನಿಪಿ-75 ಎಂದು, ಅಸಲು ದಾವೆ ಸಂಖ್ಯೆ 240/2014 ರಲ್ಲಿ ಸಿದ್ದಲಿಂಗಯ್ಯನವರ ಸಾಕ್ಷಿ ಹೇಳಿಕೆಯ ದೃಢೀಕೃತ ನಕಲನ್ನು ನಿಪಿ-76 ಎಂದು, ಬೆಂಗಳೂರು ಉಪವಿಭಾಗಾಧಿಕಾರಿಯವರ ನ್ಯಾಯಾಲಯದ ಆರ್.ಎ.(ಎಸ್.) 41/1999-2000 ಕೊಟ್ಟ ತಿಳುವಳಿಕೆಯನ್ನು ನಿಪಿ-77 ಎಂದು, ಸದರಿ ಮೇಲ್ಮನವಿಗೆ ಸಂಬಂಧಪಟ್ಟಂತೆ ಅಪೀಲು ಮೆಮೋ ಮತ್ತು ಪ್ರಮಾಣಪತ್ರದ ದೃಢೀಕೃತ ನಕಲಗಳನ್ನು ಹಾಜರು ಮಾಡಿದ್ದು ಅವುಗಳನ್ನು ಕ್ರಮವಾಗಿ ನಿಪಿ-78 ಮತ್ತು ನಿಪಿ-79 ಎಂದು ಗುರುತಿಸಲಾಯಿತು. ಬೆಂಗಳೂರಿನ ವಿಶೇಷ ತಹಶೀಲ್ದಾರ್ ನ್ಯಾಯಾಲಯದ ಆರ್.ಆರ್.ಟಿ.ಸಿ.ಆರ್ 21/2004-05 ರಲ್ಲಿ ಸಲ್ಲಿಸಿದ ಲಿಖಿತ ಹೇಳಿಕೆಯ ದೃಢೀಕೃತ ನಕಲನ್ನು ನಿಪಿ-80 ಎಂದು, ಅಸಲುದಾವೆ ಸಂಖ್ಯೆ 120/2007 ರಲ್ಲಿ ಸಲ್ಲಿಸಿದ ತಿದ್ದುಪಡಿ ವಾದಪತ್ರದ ದೃಢೀಕೃತ ನಕಲನ್ನು ನಿಪಿ-81 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ದಿನಾಂಕ : 02.02.2021 ಓ.ಎಸ್ ನಂ.84/2006 ರಲ್ಲಿ

ಪಿ.ಡಬ್ಲ್ಯೂ-1(ಹೆಂಜಾರಯ್ಯ)

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.